*** ದಿನಾಂಕ : 02.04.2020 ರ ವಿಜಯವಾಣಿ ಕನ್ನಡ ದಿನಪತ್ರಿಕೆಯಲ್ಲಿ ಪ್ರಕಟವಾಗಿರುತ್ತದೆ. ***


**ಶಿವಮೊಗ್ಗ,ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,**

ಮಾಚೇನಹಳ್ಳಿ, ನಿದಿಗೆ(ಅಂಚೆ), ಶಿವಮೊಗ್ಗ– 577 222, ☎ 08182–246165 **www.shimul.coop**


ಐ.ಎಫ್.ಟಿ. ಸಂಖ್ಯೆ/ಶಿಸಹಾಒ/ಶೇಮತಾಂ/ಟೆಂಡರ್/08/9301/2019–20 **ದಿನಾಂಕ: 05.03.2020**

ಉಲ್ಲೇಖ ಐ.ಎಫ್.ಟಿ. ಸಂಖ್ಯೆ/ಶಿಸಹಾಒ/ಶೇಮತಾಂ/ಟೆಂಡರ್/08/9889/2019–20 **ದಿನಾಂಕ: 31.03.2020**

**9301 ದಿನಾಂಕ 05.030.2020 ರ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಕರೆದ ಟೆಂಡರ್‌ನ್ನು ಈ ಕೆಳಕಂಡಂತೆ ತಿದ್ದುಪಡಿ ಮಾಡಲಾಗಿದೆ.**

ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಹಾಲು ಒಕ್ಕೂಟದ ವ್ಯಾಪ್ತಿಯಲ್ಲಿನ ಹಾಲು ಉತ್ಪಾದಕರ ಸಹಕಾರ ಸಂಘಗಳಿಂದ ಹಾಲು ಸಾಗಾಣಿಕೆ ಮಾಡಲು ಟಾರ್ಪಲ್ ಮುಚ್ಚಿದ ಬಾಡಿಯುಳ್ಳ 2012 ಅಥವಾ ನಂತರದ ಮಾದರಿಯ ವಿವಿಧ ಸಾಮರ್ಥ್ಯದ ಸರಕು ಸಾಗಾಣಿಕೆ ಮ್ಯಾಕ್ಸ್ ಪಿಕ್‌ಅಪ್/ಬೋಲೆರೊ ಪಿಕ್‌ಅಪ್ /ಲಘು ವಾಹನಗಳನ್ನು ಹಾಗೂ ಶಿವಮೊಗ್ಗ ಡೇರಿಯಿಂದ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಪಡೆದು ವಿತರಣೆ ಮಾಡಲು ಇನ್ಸೂಲೇಟೆಡ್ ಬಾಡಿಯುಳ್ಳ 2012 ರ ಅಥವಾ ನಂತರದ ಮಾದರಿಯ ಸುಸ್ಥಿತಿಯಲ್ಲಿರುವ ಸರಕು ಸಾಗಾಣಿಕೆ ವಾಹನವನ್ನು ಮತ್ತು ಚಿತ್ರದುರ್ಗ ಮಾರುಕಟ್ಟೆ ಕಾರಿನ ಮಾರ್ಗಕ್ಕೆ 2014 ಅಥವಾ ನಂತರದ ಮಾದರಿಯ **ಟಾಟಾ ವಿಸ್ತಾ/ಇಟಿಯೋಸ್/ಜೆಸ್ಟ್/ ಸಿಫ್ಟ್ ಡಿಸೇರ್** ಕಾರನ್ನು ದ್ವೈವಾರ್ಷಿಕ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಒಕ್ಕೂಟಕ್ಕೆ ಒದಗಿಸಲು ಟೆಕ್ನಿಕಲ್/ಕಮರ್ಷಿಯಲ್(ದರ) ಹೊಂದಿದ ಪ್ರತ್ಯೇಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ದಾರರು ಟೆಂಡರ್ ದಾಖಲಾತಿಗಳನ್ನು ನಿಬಂಧನೆಗಳ ಸಹಿತ ಜಿ.ಒ.ಕೆ. ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಂಡು ಸಲ್ಲಿಸುವುದು.

**ವಿಳಾಸ : https://eproc.karnataka.gov.in**

| | ವಿವರ | ಟೆಂಡರ್ ಕರೆದ ದಿನಾಂಕಗಳು | ತಿದ್ದುಪಡಿ ಮಾಡಲಾದ ದಿನಾಂಕಗಳು |
|---|---|---|---|
| 1 | ಟೆಂಡರ್ ಡೌನ್‌ಲೋಡ್ ಮಾಡಿಕೊಳ್ಳುವ | ದಿನಾಂಕ: 09.03.2020 ರಿಂದ | ದಿನಾಂಕ: 09.03.2020 ರಿಂದ |
| 2 | ಟೆಂಡರ್ ಫಾರಂಗಳನ್ನು ಇ–ಟೆಂಡರ್ ಮೂಲಕ ಸಲ್ಲಿಸಲು ಕೊನೆಯ | ದಿನಾಂಕ: 09.04.2020 ರಂದು ಸಂಜೆ: 17.30 ಗಂಟೆಯವರೆಗೆ | ದಿನಾಂಕ: 30.04.2020 ರಂದು ಸಂಜೆ: 17.30 ಗಂಟೆಯವರೆಗೆ |
| 3 | ಟೆಕ್ನಿಕಲ್ ಟೆಂಡರ್ ತೆರೆಯುವ | ದಿನಾಂಕ: 13.04.2020 ರಂದು ಬೆಳಿಗ್ಗೆ: 11.30 ಗಂಟೆಯ ನಂತರ | ದಿನಾಂಕ: 02.05.2020 ರಂದು ಬೆಳಿಗ್ಗೆ: 11.30 ಗಂಟೆಯ ನಂತರ |
| 4 | ಕಮರ್ಷಿಯಲ್ ಟೆಂಡರ್‌ಗಳನ್ನು ತೆರೆಯುವ | ದಿನಾಂಕ: 16.04.2020 ರಂದು ಬೆಳಿಗ್ಗೆ: 11.30 ಗಂಟೆಯ ನಂತರ | ದಿನಾಂಕ: 04.05.2020 ರಂದು ಬೆಳಿಗ್ಗೆ: 11.30 ಗಂಟೆಯ ನಂತರ |

ಈ ಕೆಳಗೆ ನಮೂದಿಸಿರುವ ಹಾಲು ಶೇಖರಣಾ/ವಿತರಣಾ/ ಮಾರ್ಗಗಳಿಗೆ ಟಾರ್ಪಾಲ್ ಮುಚ್ಚಿದ/ಇನ್ಸೂಲೇಟೆಡ್ ಬಾಡಿಯುಳ್ಳ ವಿವಿಧ ಸಾಮರ್ಥ್ಯದ **2012** ನೇ ಸಾಲಿನ ಅಥವಾ ನಂತರದ ಸಾಲಿನ ಮಾದರಿಯ ಸರಕು ಸಾಗಾಣಿಕೆ ವಾಹನಗಳನ್ನು **ಎರಡು ವರ್ಷದ ಅವಧಿ ಅಥವಾ ಮಾರ್ಗದ ವ್ಯಾಪ್ತಿಯ ಸಂಘದಲ್ಲಿ ಬಿ.ಎಂ.ಸಿ. ಕೇಂದ್ರ ಪ್ರಾರಂಭವಾಗುವವರೆಗೆ ಯಾವುದು ಮೊದಲೊ ಅಲ್ಲಿಯವರೆಗೆ ಮಾತ್ರ ಗುತ್ತಿಗೆ ಆಧಾರದ ಮೇಲೆ ಒದಗಿಸಲು ವಾಹನ ಮಾಲೀಕರಿಂದ ಟೆಂಡರ್ ಕರೆಯಲಾಗಿದೆ. :–**

| ಮಾರ್ಗದ ಸಂಖ್ಯೆ | ಹಾಲು ಶೇಖರಣಾ/ವಿತರಣಾ/ಕಾರಿನ ಮಾರ್ಗದ ಹೆಸರು/ವಿವರ | ವಾಹನ ಸಾಮರ್ಥ್ಯ ಟನ್‌ಗಳಲ್ಲಿ/ಮಾದರಿ | ದಿನದ ಅಂದಾಜು ಅಂತರ ಕಿ.ಮೀ (ಎರಡುಸರತಿಯಿಂದ) | ಇ.ಎಂ.ಡಿ ರೂ. | ಭದ್ರತಾ ಠೇವಣಿ ರೂ. |
|---|---|---|---|---|---|
| 1 | ನಂದಿತಾವರೆ –1ಹಾಲು ಶೇಖರಣಾ ಮಾರ್ಗ (ದಾವಣಗೆರೆ ಡೈರಿ, ಮೆದಿಕೆರನಹಳ್ಳಿ, ಕಾಟೇನಹಳ್ಳಿ, ಮರಿಕುಂಟೆ, ಅಸಗೂಡು, ತುಪ್ಪದಹಳ್ಳಿ, ಕುರುಡಿ, ದಾವಣಗೆರೆ ಡೈರಿ) | 1.5 ಟನ್ ಮ್ಯಾಕ್ಸ್‌ಪಿಕ್‌ಅಪ್ | 214 ಕಿ.ಮೀ | 25,000/– | 30,000/– |
| 2 | ನಂದಿಗುಡಿ–2 ಹಾಲು ಶೇಖರಣಾ ಮಾರ್ಗ (ದಾವಣಗೆರೆ ಡೈರಿ, ಕೆ.ಎನ್. ಹಳ್ಳಿ, ಹೊಳೆಸಿರಿಗೆರೆ, ರಾಮತೀರ್ಥ ದಾವಣಗೆರೆ ಡೈರಿ) | 1.5 ಟನ್ ಮ್ಯಾಕ್ಸ್‌ಪಿಕ್‌ಅಪ್ | 102 ಕಿ.ಮೀ | 25,000/– | 30,000/– |
| 3 | ತೇರುಮಲ್ಲೇಶ್ವರ–2 ಹಾಲು ಶೇಖರಣಾ ಮಾರ್ಗ : ಚಿತ್ರದುರ್ಗ ಶೀತಲೀಕರಣ ಕೇಂದ್ರದಿಂದ, ಬ್ಯಾರಮಡು, ಚಿಗಳಿಕಟ್ಟೆ, ಯಲ್ಲದಕೆರೆ, ಹುಲುಗಲಕುಂಟೆ, ಚಿತ್ರದುರ್ಗ ಶೀತಲೀಕರಣ ಕೇಂದ್ರ) | 1.5 ಟನ್ ಮ್ಯಾಕ್ಸ್‌ಪಿಕ್‌ಅಪ್ | 300 ಕಿ.ಮೀ | 25,000/– | 30,000/– |
| 4 | ಚಿತ್ರದುರ್ಗ –1 ನೇ ಹಾಲು ವಿತರಣಾ ಮಾರ್ಗ : ಶಿವಮೊಗ್ಗ ಡೇರಿಯಿಂದ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಪಡೆದು ಚಿತ್ರದುರ್ಗ ಪಟ್ಟಣದಲ್ಲಿ ನಂದಿನಿ ಡೀಲರ್‌ಗಳಿಗೆ ವಿತರಿಸಿ ಒಕ್ಕೂಟದ ಬ್ಯಾಂಕ್ ಖಾತೆಗೆ ಹಾಲು ಮತ್ತು ಉತ್ಪನ್ನಗಳ ಮೊತ್ತವನ್ನು ಜಮಾ ಪಡೆಯುವುದು. | 600 ಕ್ರೇಟ್‌ಗಳು | 228 ಕಿ.ಮೀ | 30,000/– | 3,00,000/– |
| 5 | ಚಿತ್ರದುರ್ಗ – 2 ನೇ ಹಾಲು ವಿತರಣಾ ಮಾರ್ಗ : ಶಿವಮೊಗ್ಗ ಡೇರಿಯಿಂದ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಪಡೆದು ಚಿತ್ರದುರ್ಗ ಪಟ್ಟಣದಲ್ಲಿ ನಂದಿನಿ ಡೀಲರ್‌ಗಳಿಗೆ ವಿತರಿಸಿ ಒಕ್ಕೂಟದ ಬ್ಯಾಂಕ್ ಖಾತೆಗೆ ಹಾಲು ಮತ್ತು ಉತ್ಪನ್ನಗಳ ಮೊತ್ತವನ್ನು ಜಮಾ ಪಡೆಯುವುದು. | 600 ಕ್ರೇಟ್‌ಗಳು | 226 ಕಿ.ಮೀ | 30,000/– | 3,00,000/– |
| 6 | ಚಿತ್ರದುರ್ಗ – 3 ನೇ ಹಾಲು ವಿತರಣಾ ಮಾರ್ಗ : ಶಿವಮೊಗ್ಗ ಡೇರಿಯಿಂದ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಪಡೆದು ಚಿತ್ರದುರ್ಗ ಪಟ್ಟಣದಲ್ಲಿ ನಂದಿನಿ ಡೀಲರ್‌ಗಳಿಗೆ ವಿತರಿಸಿ ಒಕ್ಕೂಟದ ಬ್ಯಾಂಕ್ ಖಾತೆಗೆ ಹಾಲು ಮತ್ತು ಉತ್ಪನ್ನಗಳ ಮೊತ್ತವನ್ನು ಜಮಾ ಪಡೆಯುವುದು. | 600 ಕ್ರೇಟ್‌ಗಳು | 231 ಕಿ.ಮೀ | 30,000/– | 3,00,000/– |
| 7 | ವಡ್ಡಿನಕೊಪ್ಪ ಯಲವಟ್ಟಿ ಡೇ ಕೌಂಟರ್ ಮಾರ್ಗ : ಶಿವಮೊಗ್ಗ ಡೇರಿಯಿಂದ ಹಾಲು ಮತ್ತು ಉತ್ಪನ್ನಗಳನ್ನು ಪಡೆದು ಯಲವಟ್ಟಿ, ಪುರಲೆ ವಡ್ಡಿನಕೊಪ್ಪ ಗ್ರಾಮಗಳಲ್ಲಿ ವಿತರಿಸಿ ಒಕ್ಕೂಟದ ಬ್ಯಾಂಕ್ ಖಾತೆಗೆ ಹಾಲು ಮತ್ತು ಉತ್ಪನ್ನಗಳ ಮೊತ್ತವನ್ನು ಜಮಾ ಪಡೆಯುವುದು. | 130 ಕ್ರೇಟ್‌ಗಳು | 61 ಕಿ.ಮೀ | 30,000/– | 1,50,000/– |
| 8 | ಚಿತ್ರದುರ್ಗ ಮಾರುಕಟ್ಟೆ ಕಾರಿನ ಮಾರ್ಗ ಚಿತ್ರದುರ್ಗ : 2014 ಅಥವಾ ನಂತರದ ಮಾದರಿಯ ಟಾಟಾ ವಿಸ್ತಾ/ಇಟಿಯೋಸ್/ಜೆಸ್ಟ್/ ಸಿಫ್ಟ್ ಡಿಸೇರ್ | | **3000 ಮಾಸಿಕ** | **10,000/–** | **20,000/–** |


ಮುಂದುವರೆದಿದೆ......

<u>ನಿಬಂಧನೆ ಮತ್ತು ಷರತ್ತುಗಳು</u>

1. **ಕ್ರ.ಸಂ 1 ರಿಂದ 8 ರವರೆಗಿನ ಹಾಲು ಶೇಖರಣೆ/ವಿತರಣೆ/ಕಾರಿನ ಮಾರ್ಗಗಳಿಗೆ ವಾಹನ ಹೊಂದಿಲ್ಲದವರು ಸಹ ಟೆಂಡರ್ ಅರ್ಜಿ ಸಲ್ಲಿಸಬಹುದಾಗಿದೆ. ಆದರೆ ಟೆಂಡರ್ ದರ ಒಪ್ಪಿಗೆಯಾದ 30 ದಿನದೊಳಗೆ ಟೆಂಡರ್‌ನಲ್ಲಿ ಪ್ರಕಟಿಸಿದ ನಿಗದಿತ ಮಾದರಿಯ/ ಸಾಮರ್ಥ್ಯದ ವಾಹನ ಖರೀದಿಸಿ ನೀಡಬಹುದು. ತಪ್ಪಿದಲ್ಲಿ ಟೆಂಡರ್ ನಿಯಮಾನುಸಾರ ಇ.ಎಂ.ಡಿ. ಹಣ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಇ–ಪ್ರೋಕ್ಯೂರ್‌ಮೆಂಟ್ ನಿಯಾಮವಳಿ ಅಡಿ ನೊಂದಣಿ ಮಾಡಿಸದ ಟೆಂಡರ್‌ದಾರರು ನೊಂದಣಿ ಮಾಡಿಸಿ ಗುತ್ತಿಗೆ ಅರ್ಜಿ ಸಲ್ಲಿಸಬಹುದು.**
2. **ಕನಿಷ್ಠ ಇ.ಎಂ.ಡಿ. ರೂ. 10,000/– ಆದರೆ ಶೇಖರಣೆ ಮಾರ್ಗದ ವಾಹನಗಳಿಗೆ, ಮ್ಯಾಕ್ಸ್ ಪಿಕ್‌ಅಪ್/ಕಾರು/ಲಘು ವಾಹನಗಳಿಗೆ ಅವುಗಳ ಮುಂದೆ ಸೂಚಿಸಿರುವಂತೆ ಇ.ಎಂ.ಡಿ ಯನ್ನು ಇ–ಪ್ರೋಕ್ಯೂರ್‌ಮೆಂಟ್ ವೇದಿಕೆಯ ನಿಯಾಮವಳಿಯಂತೆ ಸಲ್ಲಿಸುವುದು. ಕಡಿಮೆ ಇ.ಎಂ.ಡಿ ಪಾವತಿಸಿದಲ್ಲಿ ಟೆಂಡರ್‌ನ್ನು ತಿರಸ್ಕರಿಸಲಾಗುವುದು.**
3. ಪ್ರತಿ ಮಾರ್ಗಕ್ಕೆ ಪ್ರತ್ಯೇಕ ಟೆಂಡರ್ ಮತ್ತು ಇ.ಎಂ.ಡಿ ಸಲ್ಲಿಸುವುದು. ಪ್ರತಿ ಕಿ.ಮೀ.ಗೆ ದರ ನಮೂದಿಸುವುದು ಮತ್ತು ದರವು ಎಲ್ಲಾ ತೆರಿಗೆಗಳನ್ನು ಒಳಗೊಂಡಿರುತ್ತದೆ. ಹಾಲು ಶೇಖರಣೆ/ವಿತರಣೆ ರಾಜ್ಯ/ರಾಷ್ಟ್ರಿಯ ಹೆದ್ದಾರಿ ಶುಲ್ಕಗಳನ್ನು ಒಕ್ಕೂಟದವತಿಯಿಂದ ನೀಡಲಾಗುವುದಿಲ್ಲ. ಮಾಸಿಕ ಬಿಲ್ಲಿನಲ್ಲಿ ಅನ್ವಯಿಸುವ ಟಿ.ಡಿ.ಎಸ್/ವೃತ್ತಿ ತೆರಿಗೆ/ಜಿಎಸ್.ಟಿ. ಕಠಾಯಿಸಲಾಗುವುದು.
4. ಹಾಲು ಶೇಖರಣಾ/ವಿತರಣಾ ವಾಹನಗಳು **2012** ನೇ ಸಾಲಿನ ಅಥವಾ ನಂತರದ ಮಾಡೆಲ್ ಆಗಿರಬೇಕು. **ಮತ್ತು ಹಾಲು ವಿತರಣೆ ಮಾರ್ಗಗಳಿಗೆ ಇನ್ಸೂಲೇಟಡ್ ಬಾಡಿ ಅಳವಡಿಸುವುದು ಕಡ್ಡಾಯವಾಗಿರುತ್ತದೆ.**
5. ಕ್ರ.ಸಂ. 8 ರ ಕಾರಿನ ಮಾರ್ಗಕ್ಕೆ **<u>ಟಾಟಾ ವಿಸ್ತಾ/ಇಟಿಯೋಸ್/ಜೆಸ್ಟ್/ಸಿಫ್ಟ್ ಡಿಸೇರ್</u> 2014** ನೇ ಸಾಲಿನ ಅಥವಾ ನಂತರದ ಮಾಡೆಲ್ ಆಗಿರಬೇಕು.
6. ಟೆಂಡರ್ ದರ ಒಪ್ಪಿಗೆಯಾದ ಕೂಡಲೇ ಹಾಲು ಸಾಗಾಣಿಕೆ/ವಿತರಣೆ ವಾಹನವನ್ನು FSSAI ಲೈಸನ್ಸ್/ನೊಂದಣಿ ಮಾಡಿಸುವುದು ಕಡ್ಡಾಯವಾಗಿರುತ್ತದೆ.
7. ಹಾಲು ಶೇಖರಣೆ ಮಾರ್ಗಗಳಲ್ಲಿ ಬರುವ ಕೆಲವು ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ಬಿ.ಎಂ.ಸಿ.ಗಳನ್ನು ಅಳವಡಿಸಿ ಪ್ರಾರಂಭಿಸಲಾಗುತ್ತಿದೆ. ಬಿ.ಎಂ.ಸಿ. ಕೇಂದ್ರವು ಪ್ರಾರಂಭವಾದ ಕೂಡಲೇ ಅಂತಹ ಹಾಲು ಶೇಖರಣೆ ಮಾರ್ಗವನ್ನು ಸ್ಥಗಿತಗೊಳಿಸಲಾಗುವುದು. ಅಥವಾ ಮಾರ್ಗವನ್ನು ಅವಶ್ಯಕತೆಗೆ ತಕ್ಕಂತೆ ಪರಿಷ್ಕರಿಸಲಾಗುವುದು. ಈ ಷರತ್ತಿಗೆ ಬದ್ದರಾದ ವಾಹನ ಮಾಲೀಕರು/ಟೆಂಡರ್‌ದಾರರು ಮಾತ್ರ ಟೆಂಡರ್ ಅರ್ಜಿ ಸಲ್ಲಿಸಬಹುದಾಗಿದೆ.
8. ಕಿಲೋಮೀಟರ್ ಮತ್ತು ಮಾರ್ಗದ ಪಾಸಲೆ ಬದಲಾಗಬಹುದು. ಅದರಂತೆ ಕಿಲೋಮೀಟರ್ ಹೆಚ್ಚು ಅಥವಾ ಕಡಿಮೆಯಾಗಬಹುದು.
9. ಹಾಲು ಶೇಖರಣಾ ಮಾರ್ಗದ ವಾಹನಗಳ ಪಥವನ್ನು ಕಛೇರಿಗೆ ಅವಶ್ಯ ಬಂದಲ್ಲಿ ಬದಲಾಯಿಸಲಾಗುವುದು. ಹಾಗೂ ಸಂಘಗಳನ್ನು ಕೈ ಬಿಡಬಹುದು ಅಥವಾ ಸೇರಿಸಬಹುದು. ಈ ಸಂದರ್ಭದಲ್ಲಿ ಕಿ.ಮೀ. ಅಂತರ ಕಡಿಮೆ ಅಥವಾ ಹೆಚ್ಚಿಗೆ ಆಗುವ ಸಾಧ್ಯತೆ ಇರುತ್ತದೆ. ಶೇ. 10 ಕ್ಕಿಂತ ಜಾಸ್ತಿ ಅಥವಾ ಕಡಿಮೆ ಆದಲ್ಲಿ ಪ್ರೋರೆಟಾ ಆಧಾರದಲ್ಲಿ ದರವನ್ನು ಕಡಿಮೆ ಅಥವಾ ಹೆಚ್ಚು ಮಾಡಲಾಗುವುದು.
10. ಮಾರ್ಗಗಳ ಪುನರ್ ವಿಂಗಡಣೆ ಮತ್ತು ಮಾರ್ಗಗಳ ಗುತ್ತಿಗೆ ರದ್ದುಮಾಡುವುದು. ಇವುಗಳ ಬಗ್ಗೆ ತನ್ನ ಹಿತದೃಷ್ಟಿಯಿಂದ ಒಕ್ಕೂಟವು ಅವಶ್ಯಕತೆಗನುಗುಣವಾಗಿ ತೆಗೆದುಕೊಳ್ಳುವ ನಿರ್ಣಯಗಳಿಗೆ ಗುತ್ತಿಗೆದಾರರು /ಟೆಂಡರ್‌ದಾರರು ಬದ್ಧವಾಗಿರಬೇಕು.
11. ಎಲ್ಲಾ ಸಾರಿಗೆ ಟೆಂಡರ್‌ದಾರರು ಶಾಸನ ಬದ್ಧವಾದ ರೀತಿಯಲ್ಲಿ ತಮ್ಮ ನೌಕರರಿಗೆ (ಚಾಲಕರು/ಕಂಡಕ್ಟರ್) ವೇತನ/ ಭವಿಷ್ಯನಿಧಿ/ ಇ.ಎಸ್.ಐ ಮುಂತಾದವುಗಳನ್ನು ಪಾವತಿಸಬೇಕಾಗಿರುತ್ತದೆ. ಟೆಂಡರ್ ಪಡೆದ ಸಾರಿಗೆ ಗುತ್ತಿಗೆದಾರರೇ ತಮ್ಮ ನೌಕರರಿಗೆ ಶಾಸನ ಬದ್ಧವಾದ ರೀತಿಯಲ್ಲಿ ವೇತನ ಪಾವತಿಸತಕ್ಕದ್ದು ಹಾಗೂ ಇದಕ್ಕೆ ಒಕ್ಕೂಟವು ಜವಾಬ್ದಾರಿಯಾಗಿರುವುದಿಲ್ಲ.

**ಯಾವುದೇ ಕಾರಣ ನೀಡದೆ ಟೆಂಡರ್‌ನ್ನು ಅಂಗೀಕರಿಸುವ /ತಿರಸ್ಕರಿಸುವ ಹಕ್ಕನ್ನು ವ್ಯವಸ್ಥಾಪಕ ನಿರ್ದೇಶಕರು ಹೊಂದಿರುತ್ತಾರೆ.**

**ವ್ಯವಸ್ಥಾಪಕ ನಿರ್ದೇಶಕರ ತೀರ್ಮಾನವೆ ಅಂತಿಮವಾದುದು.**

**ಹೆಚ್ಚಿನ ಮಾಹಿತಿಗಾಗಿ ಕಚೇರಿ ವೇಳೆಯಲ್ಲಿ ಶೇಮತಾಂ ವಿಭಾಗವನ್ನು ಮತ್ತು ಒಕ್ಕೂಟದ ವೆಬ್‌ಸೈಟ್**

**www.shimul.coop ಸಂಪರ್ಕಿಸಬಹುದು.**

ದಿನಾಂಕ : 05.03.2020

ಸ್ಥಳ : ಮಾಚೇನಹಳ್ಳಿ

**ಸಹಿ/–**

**ವ್ಯವಸ್ಥಾಪಕ ನಿರ್ದೇಶಕರು**

ಶಿವಮೊಗ್ಗ,ದಾವಣಗೆರೆ ಮತ್ತು ಚಿತ್ರದುರ್ಗ

ಜಿಲ್ಲಾ ಸಹಕಾರ ಹಾಲು ಒಕ್ಕೂಟ